# ತಾರಾಬಾಯಿ ಶಿಂಧೆಯವರ ಜೀವನ ಮತ್ತು ಹೋರಾಟಗಳು

**ನಾಗಮ್ಮ ಹೆಚ್.ಎನ್.***

**DOI: https://doi.org/10.5281/zenodo.21241251**

**ABSTRACT**

19ನೇ ಶತಮಾನದ ಅಗ್ರಗಣ್ಯ ಸ್ತ್ರೀವಾದಿ ಚಿಂತಕಿ ತಾರಾಬಾಯಿ ಶಿಂಧೆಯವರ ಬದುಕು, ಹೋರಾಟ ಮತ್ತು ಅವರ ಕ್ರಾಂತಿಕಾರಿ ವಿಚಾರಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಪುರುಷಪ್ರಧಾನ ಸಮಾಜ, ಜಾತಿ ಶ್ರೇಣಿ ಹಾಗೂ ಧಾರ್ಮಿಕ ಅಸಮಾನತೆಗಳನ್ನು ದಿಟ್ಟವಾಗಿ ಪ್ರಶ್ನಿಸಿದ ಅವರು, ಭಾರತೀಯ ಸ್ತ್ರೀವಾದದ ಇತಿಹಾಸದಲ್ಲಿ ಒಂದು ಹೊಸ ಮೈಲುಗಲ್ಲನ್ನು ಸ್ಥಾಪಿಸಿದರು. ಸತ್ಯಶೋಧಕ ಸಮಾಜದ ತತ್ವಗಳಿಂದ ಪ್ರೇರಿತರಾಗಿದ್ದ ತಾರಾಬಾಯಿ, ತಮ್ಮ ಪ್ರಸಿದ್ಧ ಕೃತಿ 'ಸ್ತ್ರೀಪುರುಷ ತುಲನಾ' (1882) ಮೂಲಕ ಸ್ತ್ರೀ–ಪುರುಷರ ನಡುವಿನ ದ್ವಂದ್ವ ನೈತಿಕ ಮಾನದಂಡಗಳನ್ನು ಮತ್ತು ಬೂಟಾಟಿಕೆಯನ್ನು ಕಟುವಾಗಿ ಟೀಕಿಸಿದರು. ಮಹಿಳೆಯರಿಗೆ ಶಿಕ್ಷಣ ಮತ್ತು ಸ್ವಾತಂತ್ರ್ಯವಿಲ್ಲದ ಆ ಕಾಲದಲ್ಲಿ, ವಿಧವೆಯರ ಶೋಷಣೆ ಮತ್ತು ಲಿಂಗ ತಾರತಮ್ಯದ ವಿರುದ್ಧ ಅವರು ಎತ್ತಿದ ಧ್ವನಿ ಇಂದಿಗೂ ಪ್ರಸ್ತುತವಾಗಿದೆ. ಅವರ ನಿರ್ಭೀತ ಬರಹಗಳು ಮತ್ತು ಸಮಾನತೆಯ ಬದ್ಧತೆಯು ಆಧುನಿಕ ಸ್ತ್ರೀವಾದಿ ಹಾಗೂ ಸಾಮಾಜಿಕ ನ್ಯಾಯದ ಚಳುವಳಿಗಳಿಗೆ ಹೇಗೆ ಬಲವಾದ ಬುನಾದಿಯಾಗಿದೆ ಎಂಬುದನ್ನು ಎತ್ತಿ ತೋರಿಸಲಾಗಿದೆ.

**KEYWORDS:** ತಾರಾಬಾಯಿ ಶಿಂಧೆ, ಸ್ತ್ರೀಪುರುಷ ತುಲನಾ, ಸ್ತ್ರೀವಾದ, ಲಿಂಗ ಅಸಮಾನತೆ, ಪಿತೃಪ್ರಧಾನ ಸಮಾಜ.

* **ಡಾ. ನಾಗಮ್ಮ ಹೆಚ್.ಎನ್.,** ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುಣಿಗಲ್.

19ನೇ ಶತಮಾನದ ಪ್ರಮುಖ ಸ್ತ್ರೀವಾದಿ ಹೋರಾಟಗಾರರಲ್ಲಿ ಅಗ್ರಸ್ಥಾನದಲ್ಲಿ ಕೇಳಿ ಬರುವ ಹೆಸರು ತಾರಾಬಾಯಿ ಶಿಂಧೆ. ತಾರಾಬಾಯಿ ಶಿಂಧೆ ಭಾರತದ ಆರಂಭಿಕ ಸ್ತ್ರೀವಾದಿ ಧ್ವನಿಗಳಲ್ಲಿ ಒಬ್ಬರು. 19 ನೇ ಶತಮಾನದ ಭಾರತದ ಅತ್ಯಂತ ಆಮೂಲಾಗ್ರ ಮತ್ತು ಕ್ರಾಂತಿಕಾರಿ ಚಿಂತಕರಲ್ಲಿ ಒಬ್ಬರಾಗಿ ತಾರಾಬಾಯಿ ಶಿಂಧೆ ಎದ್ದು ಕಾಣುತ್ತಾರೆ. ಮಹಿಳೆಯರು ಮೌನ ಮತ್ತು ವಿಧೇಯರಾಗಿರಬೇಕೆಂದು ನಿರೀಕ್ಷಿಸಲಾಗಿದ್ದ ಸಮಯದಲ್ಲಿ, ಅವರು ಪಿತೃಪ್ರಭುತ್ವ, ಜಾತಿ ಶ್ರೇಣಿ ಮತ್ತು ಧಾರ್ಮಿಕ ಅಧಿಕಾರದ ಅಡಿಪಾಯಗಳನ್ನೇ ಪ್ರಶ್ನಿಸಲು ಧೈರ್ಯ ಮಾಡಿದರು. ಅವರ ಆಲೋಚನೆಗಳು ಅವರ ಕಾಲಕ್ಕಿಂತ ಬಹಳ ಮುಂದಿದ್ದವು. ತಾರಾಬಾಯಿ ಬಹಿರಂಗವಾಗಿ ಮತ್ತು ವಿಮರ್ಶಾತ್ಮಕವಾಗಿ ಬರೆಯುವ ಮೂಲಕ ಈ ಮೌನವನ್ನು ಮುರಿದರು. ಸಾಮಾಜಿಕವಾಗಿ ಮೌನವಾಗಿದ್ದ ಮಹಿಳೆಯರಿಗೆ ಧ್ವನಿ ನೀಡಿದರು.

ಸುಮಾರು 150 ವರ್ಷಗಳ ಹಿಂದೆಯೇ ಮಹಿಳೆಯರಿಗೆ ಸಾಮಾಜಿಕ ಅಥವಾ ಬೌದ್ಧಿಕ ಸ್ವಾತಂತ್ರ್ಯವೇ ಇಲ್ಲದಿದ್ದ ಸಮಯದಲ್ಲಿ ಸಮಾಜದಲ್ಲಿ ಆಳವಾಗಿ ಬೇರೂರಿದ್ದ ಪಿತೃಪ್ರಭುತ್ವದ ರೂಢಿಗಳು ಮತ್ತು ಜಾತಿ ಅಸಮಾನತೆಗಳನ್ನು ಪ್ರಶ್ನಿಸಿದರು. ಅವರ ಕೆಲಸವು ಭಾರತೀಯ ಸ್ತ್ರೀವಾದದ ಇತಿಹಾಸದಲ್ಲಿ ಒಂದು ಹೆಗ್ಗುರುತಾಗಿ ಉಳಿದಿದೆ. 12ನೇ ವಯಸ್ಸಿನಲ್ಲಿ ವಿವಾಹವಾಗಿ 22ನೇ ವಯಸ್ಸಿನಲ್ಲಿ ವಿಧವೆಯಾದ ಈ ಹೆಣ್ಣು ಮಗಳು ಸ್ತ್ರೀ ಹಕ್ಕುಗಳಿಗಾಗಿ ನಡೆಸಿದ ಹೋರಾಟ, ತೋರಿದ ಧೈರ್ಯ ಸಾಹಸಗಳು ಅಸಾಮಾನ್ಯವಾಗಿದ್ದವು. ಒಬ್ಬ ಸಾಮಾನ್ಯ ಹೆಣ್ಣುಮಗಳಾಗಿದ್ದರೆ ಪುರುಷಪ್ರಧಾನ ಸಮಾಜದಲ್ಲಿ ಶೋಷಣೆಗೆ ತಲೆಬಾಗಿ ತನ್ನ ಜೀವನವನ್ನು ಅಂತ್ಯಗೊಳಿಸುತ್ತಿದ್ದಳೇನೋ? ಆದರೆ ತಾರಾಬಾಯಿಯವರ ಜೀವನದಲ್ಲಾದ ಘಟನೆ ಅವರನ್ನು ಪುರುಷ ಪ್ರಧಾನ ಸಮಾಜ ಹಾಗೂ ಜಾತಿ ಆಧಾರಿತ ಶೋಷಣೆಯ ವಿರುದ್ಧ ಸಿಡಿದೇಳುವಂತೆ ಮಾಡಿತು. ವಿಶೇಷವಾಗಿ ಅವರ ಪ್ರಸಿದ್ಧ ಕೃತಿ ಸ್ತ್ರೀಪುರುಷ ತುಲನಾ (ಮಹಿಳೆಯರು ಮತ್ತು ಪುರುಷರ ನಡುವಿನ ಹೋಲಿಕೆ) ಸ್ತ್ರೀಯರ ಪರ ನಿಲುವಿನಲ್ಲಿ ಒಂದು ಮಹತ್ವದ ಮೈಲುಗಲ್ಲಾಗಿದೆ.

ಸ್ತ್ರೀಯನ್ನು ಅಗತ್ಯವಿದ್ದಾಗ ಮಾತ್ರ ಬಳಸಿಕೊಳ್ಳುವ, ಭಾವನೆಗಳೇ ಇಲ್ಲದ ನಿರ್ಜೀವ ವಸ್ತುವಿನಂತೆ ಎಂದು ಪರಿಗಣಿಸಿದ್ದ ಕಾಲದಲ್ಲಿ ತಾರಾಬಾಯಿಯವರು ಸಮಾನತೆಯನ್ನು ಪ್ರತಿಪಾದಿಸುವ ಪ್ರವರ್ತಕಿಯಾಗಿ, ನೊಂದ ಮಹಿಳೆಯರ ಆಶಾಕಿರಣವಾಗಿ ಕಾಣಿಸಿಕೊಂಡರು. ತಾರಾಬಾಯಿ ಶಿಂಧೆ 1850 ರಲ್ಲಿ ಮರಾಠಿ ಕುಂಬಿ ಕುಟುಂಬದಲ್ಲಿ ಇಂದಿನ ಮಹಾರಾಷ್ಟ್ರದ ಬೇರಾರ್ ಪ್ರದೇಶದಲ್ಲಿ ಜನಿಸಿದರು. ಅವರು ಬಾಪೂಜಿ ಹರಿ ಶಿಂಧೆಯವರ ಏಕೈಕ ಪುತ್ರಿಯಾಗಿದ್ದರು. ಬಾಪೂಜಿ ಹರಿ ಶಿಂಧೆಯವರು ಬ್ರಿಟಿಷ್ ಸರ್ಕಾರದ ಕಂದಾಯ ಇಲಾಖೆಯಲ್ಲಿ ಗುಮಾಸ್ತರಾಗಿದ್ದರು. ಅವರು ಬ್ರಾಹ್ಮಣೇತರ ಕುಟುಂಬಕ್ಕೆ ಸೇರಿದವರಾಗಿದ್ದು, ಇದು ಅವರ ಪ್ರಗತಿಪರ ದೃಷ್ಟಿಕೋನವನ್ನು ರೂಪಿಸುವಲ್ಲಿ ಮಹತ್ವದ ಪಾತ್ರ ವಹಿಸಿದೆ. ಅವರ ತಂದೆ ಬಾಪೂಜಿ ಹರಿ ಶಿಂಧೆಯವರು ಪ್ರಗತಿಪರರಾಗಿದ್ದು, ಜ್ಯೋತಿರಾವ್ ಫುಲೆ ಸ್ಥಾಪಿಸಿದ ಸಮಾಜೋ–ಧಾರ್ಮಿಕ ಸುಧಾರಣಾವಾದಿ ಸಂಘಟನೆಯಾದ ಸತ್ಯಶೋಧಕ ಸಮಾಜದೊಂದಿಗೆ ಸಂಬಂಧ ಹೊಂದಿದ್ದರು. ಈ ಪರಿಸರವು ತಾರಾಬಾಯಿಯನ್ನು ಚಿಕ್ಕ ವಯಸ್ಸಿನಿಂದಲೇ ಸಾಮಾಜಿಕ ನ್ಯಾಯ, ಜಾತಿ ವಿರೋಧಿ ಚಳುವಳಿಗಳು ಮತ್ತು ಲಿಂಗ ಸಮಾನತೆಯ ವಿಚಾರಗಳಿಗೆ ಒಡ್ಡಿತು.

ತಾರಾಬಾಯಿಯವರು ಅವರ ಕಾಲದ ಮಹಿಳೆಯರಿಗಿಂತ ಭಿನ್ನವಾಗಿ ಜೀವನವನ್ನು ನೋಡಿದರು. ತಾರಾಬಾಯಿಯವರ ತಂದೆ ಆಧುನಿಕ ದೃಷ್ಟಿಕೋನವನ್ನು ಹೊಂದಿದ್ದ ಪ್ರಗತಿಪರ ಹಾಗೂ ಬುದ್ಧಿವಂತ ಚಿಂತಕರಾಗಿದ್ದರು. ಮಗಳಿಗೆ ಉತ್ತಮ ಶಿಕ್ಷಣವನ್ನು

ಕೊಡಿಸಬೇಕೆಂಬ ಆಸೆಯನ್ನು ಹೊಂದಿದ್ದರು. ಆದರೆ ತಮ್ಮ ಮನೆಯ ಹತ್ತಿರದಲ್ಲಿ ಯಾವುದೇ ಶಾಲೆಗಳಿರದ ಕಾರಣ ತಾವೇ ಮನೆಯಲ್ಲಿ ಮಗಳಿಗೆ ಮರಾಠಿ, ಸಂಸ್ಕೃತ ಹಾಗೂ ಇಂಗ್ಲೀಷ್ ಭಾಷೆಗಳನ್ನು ಕಲಿಸಿದ್ದರು. ತಾರಾಬಾಯಿಯವರ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಅವರ ತಂದೆಯವರ ವೈಚಾರಿಕತೆ, ಪ್ರಗತಿಪರ ಚಿಂತನೆಗಳು, ಮಾನವೀಯ ಗುಣಗಳ ಪ್ರಭಾವ ಅಪಾರವಾಗಿದೆ. ಮುಂದೆ ಈ ಗುಣಗಳು ಅವರು ಸಮಾಜದ ರೀತಿ ರಿವಾಜುಗಳನ್ನು, ಮಹಿಳೆಯರ ಬಗೆಗಿನ ಅಸಮಾನತೆಯನ್ನು, ಶೋಷಣೆಯನ್ನು ಪ್ರಶ್ನಿಸುವ ಆತ್ಮಸ್ಥೈರ್ಯವನ್ನು ಜೀವನದುದ್ದಕ್ಕೂ ನೀಡಿದವು. ತಾರಾಬಾಯಿಯವರ ತಂದೆ ಪ್ರಗತಿಪರರಾಗಿದ್ದರೂ ಕೂಡ ಅವರಿಗೆ ಸಮಾಜದ ಭಯವಿತ್ತು. ಹೀಗಾಗಿ ತಡ ಮಾಡಿದರೆ ಮಗಳಿಗೆ ಗಂಡು ಸಿಗದೇ ಒಂಟಿಯಾಗಿಯೇ ಉಳಿದುಬಿಡುತ್ತಾಳೆ ಎಂಬ ಆತಂಕದಿಂದ ತಾರಾಬಾಯಿಯವರಿಗೆ 12ನೇ ವಯಸ್ಸಿನಲ್ಲಿಯೇ ವಿವಾಹ ಮಾಡಿದ್ದರು.

ತಾರಾಬಾಯಿಯವರ ಸಾಮಾಜಿಕ ಹೋರಾಟಗಳು ಹಾಗೂ ಕೊಡುಗೆಗಳನ್ನು ಅರ್ಥಮಾಡಿಕೊಳ್ಳಲು, ಅವರು ವಾಸಿಸುತ್ತಿದ್ದ ಸಮಾಜವನ್ನು ನೋಡುವುದು ಬಹಳ ಮುಖ್ಯವಾಗುತ್ತದೆ. ಅಂದಿನ ಸಮಾಜದಲ್ಲಿ ಮಹಿಳೆಯರನ್ನು ಪುರುಷರಿಗಿಂತ ಕೀಳಾಗಿ ನಡೆಸಿಕೊಳ್ಳಲಾಗುತ್ತಿತ್ತು. ಬಾಲ್ಯವಿವಾಹ ಮತ್ತು ವಿಧವೆಯರ ದಬ್ಬಾಳಿಕೆಯಂತಹ ಮಹಿಳಾ ಶೋಷಣೆಗಳು ಸಾಮಾನ್ಯವಾದ ಸಂಗತಿಗಳಾಗಿದ್ದವು. ಜೀವನದ ನೈತಿಕ ವೈಫಲ್ಯಗಳಿಗೆ ವಿಧವೆಯರನ್ನು ಹೆಚ್ಚಾಗಿ ದೂಷಿಸಲಾಗುತ್ತಿತ್ತು. ಮಹಿಳೆಯರಿಗೆ ಶಿಕ್ಷಣವನ್ನು ನಿರಾಕರಿಸಲಾಗಿತ್ತು. ಪಿತೃಪ್ರಧಾನ ಕುಟುಂಬ ಪದ್ಧತಿ ಮತ್ತು ಜಾತಿಯ ಶ್ರೇಣಿಗಳು ಸಾಮಾಜಿಕ ಜೀವನದಲ್ಲಿ ಪ್ರಾಬಲ್ಯ ಸಾಧಿಸಿದವು. ತಾರಾಬಾಯಿಯವರು ಇಂತಹ ಅನ್ಯಾಯಗಳನ್ನು ತುಂಬಾ ಹತ್ತಿರದಿಂದ ನೋಡಿದರು. ಈ ಅಂಶಗಳು ಅವರಲ್ಲಿ ಬೌದ್ಧಿಕ ಹೋರಾಟಕ್ಕೆ ಉತ್ತೇಜನ ನೀಡಿದವು. 19 ನೇ ಶತಮಾನದ ಭಾರತದ ಅತ್ಯಂತ ಆಮೂಲಾಗ್ರ ಮತ್ತು ಕ್ರಾಂತಿಕಾರಿ ಚಿಂತಕರಲ್ಲಿ ಒಬ್ಬರಾಗಿ ತಾರಾಬಾಯಿ ಶಿಂಧೆ ಎದ್ದು ಕಾಣುತ್ತಾರೆ. ಮಹಿಳೆಯರು ಮೌನ ಮತ್ತು ವಿಧೇಯರಾಗಿರಬೇಕೆಂದು ನಿರೀಕ್ಷಿಸಲಾಗಿದ್ದ ಸಮಯದಲ್ಲಿ, ಅವರು ಪಿತೃಪ್ರಭುತ್ವ, ಜಾತಿ ಶ್ರೇಣಿ ಮತ್ತು ಧಾರ್ಮಿಕ ಅಧಿಕಾರದ ಅಡಿಪಾಯಗಳನ್ನೇ ಪ್ರಶ್ನಿಸಲು ಧೈರ್ಯ ಮಾಡಿದರು. ಅವರ ಆಲೋಚನೆಗಳು ಕೇವಲ ಸುಧಾರಣಾವಾದಿಯಾಗಿರಲಿಲ್ಲ – ಅವು ಆಳವಾಗಿ ಪರಿವರ್ತಕವಾಗಿದ್ದವು ಮತ್ತು ಅವರ ಕಾಲಕ್ಕಿಂತ ಬಹಳ ಮುಂದಿದ್ದವು.

ತಾರಾಬಾಯಿಯವರ ಹೋರಾಟದಲ್ಲಿ ಅವರನ್ನು ಪ್ರಭಾವಿಸಿದವರು ಜ್ಯೋತಿರಾವ್ ಫುಲೆ ಮತ್ತು ಸಾವಿತ್ರಿಬಾಯಿ ಫುಲೆ. ಅವರು ಸತ್ಯಶೋಧಕ ಸಮಾಜದಿಂದ ಅನೇಕ ವಿಚಾರಗಳನ್ನು ತಮ್ಮ ಹೋರಾಟದಲ್ಲಿ ಅಳವಡಿಸಿಕೊಂಡರು. ಅವುಗಳೆಂದರೆ ಎಲ್ಲಾ ಮಾನವರಲ್ಲಿ ಸಮಾನತೆಯನ್ನು ಸಾಧಿಸುವುದು, ಬ್ರಾಹ್ಮಣ ಪ್ರಾಬಲ್ಯವನ್ನು ವಿರೋಧಿಸುವುದು, ಮಹಿಳೆಯರಿಗೆ ಶಿಕ್ಷಣದ ಮಹತ್ವವನ್ನು ಪ್ರತಿಪಾದಿಸುವುದು, ಅಂಚಿನಲ್ಲಿರುವ ಸಮುದಾಯಗಳಿಗೆ ಸಾಮಾಜಿಕ ನ್ಯಾಯವನ್ನು ದೊರೆಯುವಂತೆ ಮಾಡುವುದು ಮುಂತಾದ ವಿಚಾರಗಳನ್ನು ತಮ್ಮ ಹೋರಾಟದಲ್ಲಿ ಅಳವಡಿಸಿಕೊಂಡರು. ಮಹಿಳೆಯರಿಗೆ ಮೂಲಭೂತ ಹಕ್ಕುಗಳನ್ನು ನಿರಾಕರಿಸಿ ಮೌನವಾಗಿರಬೇಕೆಂದು ನಿರೀಕ್ಷಿಸಲಾದ ಸಮಯದಲ್ಲಿ, ಅವರು ಲಿಂಗ ತಾರತಮ್ಯ, ಜಾತಿ ಅಸಮಾನತೆ ಮತ್ತು ಸಾಮಾಜಿಕ ಬೂಟಾಟಿಕೆಗಳ ವಿರುದ್ಧ ಧೈರ್ಯದಿಂದ ಮಾತನಾಡಿದರು. ಮಾತನಾಡಲು ವೇದಿಕೆಯಿಲ್ಲದ ಅಸಂಖ್ಯಾತ ಮಹಿಳೆಯರ ನೋವು ಮತ್ತು ಕೋಪವನ್ನು ಅವರ ಬರವಣಿಗೆ ವ್ಯಕ್ತಪಡಿಸಿತು.

**ಸ್ತ್ರೀಪುರುಷ ತುಲನಾ ಕೃತಿ ರಚನೆ:**

1800 ರ ದಶಕದಲ್ಲಿ, ಸಾರ್ವಜನಿಕ ಚರ್ಚೆಯಲ್ಲಿ ಮಹಿಳೆಯರಿಗೆ ಬಹುತೇಕ ಧ್ವನಿ ಇರಲಿಲ್ಲ. ಮಹಿಳೆಯರಿಗೆ ಶಿಕ್ಷಣ ವಿರಳವಾಗಿತ್ತು ಮತ್ತು ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದು ಅದರಲ್ಲೂ ಪ್ರಮುಖವಾಗಿ ಪುರುಷರ ವಿರುದ್ಧ ಧ್ವನಿಯನ್ನು ಸಂಪೂರ್ಣ ಅಡಗಿಸಲಾಗಿತ್ತು. ಇಂತಹ ಸಂದರ್ಭದಲ್ಲಿ ತಾರಾಬಾಯಿ ಶಿಂಧೆಯವರು ಪುರುಷರಿಗೆ ನೇರ, ದಿಟ್ಟ ಹಾಗೂ ಸುದೀರ್ಘ ಪ್ರಶ್ನೆಗಳನ್ನು ಹಾಕಿದರು. ಮೊಟ್ಟಮೊದಲ ಅವರ ಜೀವನದ ಅನುಭವ, ಪುರುಷ ಪ್ರಧಾನ ಆಚರಣೆಗಳು ಹಾಗೂ ಜಾತಿಯ ಹೆಸರಿನಲ್ಲಿ ನಡೆಯುವ ಶೋಷಣೆಗಳ ವಿರುದ್ಧ ಪ್ರತಿಭಟಿಸುವಂತೆ ಮಾಡಿತು. ಸ್ತ್ರೀವಾದಿಗಳಲ್ಲಿ ಒಬ್ಬರೆನಿಸಿದ ತಾರಾಬಾಯಿಯನ್ನು ಭಾರತದ ಮೊದಲ ಸ್ತ್ರೀವಾದಿ ಬರಹಗಾರರಲ್ಲಿ ಒಬ್ಬರೆಂದು ಪರಿಗಣಿಸಲಾಗಿದೆ. ಅವರು ಸ್ತ್ರೀಪುರುಷ ತುಲನಾ ಎಂಬ ಗ್ರಂಥವನ್ನು 1882ರಲ್ಲಿ ರಚಿಸಿದರು. ಇದು ಸುಮಾರು 52 ಪುಟಗಳಲ್ಲಿ ರಚನೆಯಾಗಿದ್ದು, ಮರಾಠಿ ಭಾಷೆಯಲ್ಲಿದೆ. ಈ ಕೃತಿಯು ಅನ್ಯಾಯದ ವಿರುದ್ಧ ಪ್ರಬಲ ಪ್ರತಿಭಟನೆಯಾಗಿ ನಿಲ್ಲುತ್ತದೆ. ತಾರಾಬಾಯಿಯವರಿಗೆ ಈ ಕೃತಿಯನ್ನು ರಚಿಸಲು ಘಟನೆಯೊಂದು ಕಾರಣವಾಯಿತು. ವಿಜಯಲಕ್ಷ್ಮಿ ಎಂಬ ಯುವ ವಿಧವೆ ಅನೈತಿಕ ಸಂಬಂಧದಿಂದ ಗರ್ಭಿಣಿಯಾಗುತ್ತಾಳೆ. ಆದರೆ ಸಮಾಜಕ್ಕೆ ಹೆದರಿ ಗರ್ಭಪಾತ ಮಾಡಿಸಿಕೊಂಡಾಗ ಆಕೆಯ ವಿರುದ್ಧ ಕ್ರಿಮಿನಲ್ ಪ್ರಕರಣವನ್ನು ದಾಖಲಿಸಲಾಯಿತು. ಆಕೆ ಮಾಡಿದ್ದು ಅಪರಾಧವೆಂದು ಪರಿಗಣಿಸಿ ನ್ಯಾಯಾಲಯವು ಆಕೆಗೆ ಮರಣದಂಡನೆಯ ಶಿಕ್ಷೆಯನ್ನು ವಿಧಿಸಿತು. ಆದರೆ ಈ ಅನೈತಿಕ ಸಂಬಂಧದಲ್ಲಿ ಭಾಗಿಯಾದ ಪುರುಷನನ್ನು ಈ ಪ್ರಕರಣದಿಂದ ಹೊರಗಿಡಲಾಯಿತು. ತೀರ್ಪು ಪ್ರಕಟವಾದಾಗ ಪುಣೆಯ ಪತ್ರಿಕೆಯೊಂದು ಮಹಿಳೆಯರ ಬದಲಾಗುತ್ತಿರುವ ನೈತಿಕತೆ ಮತ್ತು ನಡವಳಿಕೆಯನ್ನು ಕುರಿತು ಟೀಕೆಗಳನ್ನೊಳಗೊಂಡ ಲೇಖನಗಳ ಸರಣಿಯನ್ನೇ ಪ್ರಕಟಿಸಿತು. ಈ ಪತ್ರಿಕೆಯ ಲೇಖನಗಳಿಗೆ ಪ್ರತಿಭಟನಾ ಪೂರಕವಾಗಿ ತಾರಾಬಾಯಿಯವರು ಸ್ತ್ರೀಪುರುಷ ತುಲನಾ ಎಂಬ ಗ್ರಂಥ ರಚಿಸಿದರು. ತಾರಾಬಾಯಿ ವಿಜಯಲಕ್ಷ್ಮಿಯ ಈ ಘಟನೆಯನ್ನು ಇಡೀ ವ್ಯವಸ್ಥೆಯನ್ನು ಪ್ರಶ್ನಿಸಲು ಬಳಸಿಕೊಂಡರು. ಮಹಿಳೆಯರಿಗೆ ಸಂಬಂಧಿಸಿದಂತೆ ನ್ಯಾಯವು ಪಕ್ಷಪಾತ ಮತ್ತು ಅಸಮಾನವಾಗಿದೆ ಎಂದರು. ಸತ್ಯಶೋಧಕ ಸಮಾಜದಿಂದ ಪ್ರಭಾವಿತರಾಗಿದ್ದ ಅವರು, ತಮ್ಮ ಕೃತಿಯಲ್ಲಿ ಸತ್ಯಶೋಧಕ ಸಮಾಜದ ಜಾತಿ ವಿರೋಧಿ ಮತ್ತು ಸುಧಾರಣಾವಾದಿ ಸಿದ್ಧಾಂತದ ವಿಚಾರಗಳನ್ನು ಪೂರಕ ಅಂಶಗಳಾಗಿ ಬಳಸಿಕೊಂಡರು. ಈ ಪುಸ್ತಕ ಪ್ರಕಟವಾದಾಗ ಯಾರೂ ಕೂಡ ಈ ಪುಸ್ತಕವನ್ನು ಸ್ವಾಗತಿಸಲಿಲ್ಲ. ಬದಲಿಗೆ ಕೃತಿಯ ಬಗ್ಗೆ ಟೀಕೆಗಳು ಹೆಚ್ಚಾದವು. 19 ನೇ ಶತಮಾನದಲ್ಲಿ ಪಿತೃಪ್ರಧಾನ ಸಮಾಜದ ಕುರಿತು ದಿಟ್ಟ ಟೀಕೆಯನ್ನು ಬರೆಯುವುದು ಅತ್ಯಂತ ಅಪಾಯಕಾರಿಯಾಗಿತ್ತು. ಪುರುಷ ಅಧಿಕಾರವನ್ನು ಪ್ರಶ್ನಿಸುವ ಮಹಿಳೆಯನ್ನು ಸ್ವೀಕರಿಸಲು ಅಂದಿನ ಸಮಾಜ ಸಿದ್ಧರಿರಲಿಲ್ಲ. ಹೀಗಾಗಿ ಪುರುಷ ಸುಧಾರಕರಿಗೆ ಸಿಕ್ಕ ಮನ್ನಣೆ ಹಾಗೂ ಸಾಂಸ್ಥಿಕ ಬೆಂಬಲ ತಾರಾಬಾಯಿಯಂತಹ ಮಹಿಳಾ ಸುಧಾರಕರಿಗೆ ಸಿಗಲಿಲ್ಲ.

**ತಾರಾಬಾಯಿ ಶಿಂಧೆಯವರು ತಮ್ಮ ಸ್ತ್ರೀಪುರುಷ ತುಲನಾ ಗ್ರಂಥದಲ್ಲಿ ಈ ಕೆಳಕಂಡ ವಿಚಾರಗಳನ್ನು ಪ್ರಮುಖವಾಗಿ ಪ್ರಸ್ತಾಪಿಸಿದ್ದಾರೆ:**

1. ಲಿಂಗ ಅಸಮಾನತೆಯನ್ನು ಪ್ರಶ್ನಿಸಿದ ತಾರಾಬಾಯಿ ನೈತಿಕ ವೈಫಲ್ಯಗಳಿಗೆ ಪುರುಷರನ್ನು ಕ್ಷಮಿಸುವ ಸಮಾಜ ಮಹಿಳೆಯರನ್ನು ಮಾತ್ರ ಏಕೆ ದೂಷಿಸಲಾಗುತ್ತದೆ? ನೈತಿಕ ಮಾನದಂಡಗಳನ್ನು ಮಹಿಳೆಯರ ಮೇಲೆಯೇ ಏಕೆ ಅನ್ಯಾಯವಾಗಿ ಹೇರಲಾಗುತ್ತದೆ? ಎಂದು ಪ್ರಶ್ನಿಸಿದರು. ಸ್ತ್ರೀ–ಪುರುಷರಿಗೆ ಸಂಬಂಧಿಸಿದಂತೆ ಸಮಾಜದಲ್ಲಿರುವ ಈ ದ್ವಂದ್ವ

ಮಾನದಂಡಗಳನ್ನು ಅವರು ಬಹಿರಂಗಪಡಿಸಿದರು.

2. ಅಸಮಾನತೆಯನ್ನು ಸಮರ್ಥಿಸುವ ಸಂಪ್ರದಾಯಗಳನ್ನು ಟೀಕಿಸಿದರು. ಮಹಿಳೆಯರು ಸ್ವಾಭಾವಿಕವಾಗಿ ಕೀಳು ಎಂಬ ಅಂದಿನ ಸಮಾಜದ ಮನೋಭಾವನೆಯನ್ನು ಅವರು ಪ್ರಶ್ನಿಸಿದರು. ಲಿಂಗ ದಬ್ಬಾಳಿಕೆಯನ್ನು ಜಾತಿ ತಾರತಮ್ಯದೊಂದಿಗೆ ಜೋಡಿಸಿದರು. ಮಹಿಳೆಯರು ಪುರುಷರಿಗಿಂತ ನೈತಿಕವಾಗಿ ದುರ್ಬಲರು ಎಂಬ ಭಾವನೆಯನ್ನು ತಾರಾಬಾಯಿ ಬಲವಾಗಿ ವಿರೋಧಿಸಿದರು.
3. ಪಿತೃಪ್ರಭುತ್ವವನ್ನು ಟೀಕಿಸಿ ಪುರುಷ ಪ್ರಾಬಲ್ಯ ಮತ್ತು ಬೂಟಾಟಿಕೆಯನ್ನು ಅವರು ಧೈರ್ಯದಿಂದ ಟೀಕಿಸಿದರು. ಪುರುಷರು ಮಹಿಳೆಯರನ್ನು ದಬ್ಬಾಳಿಕೆ ಮಾಡುವಾಗ ತಮಗೆ ಲಾಭವಾಗುವ ನಿಯಮಗಳನ್ನು ಮಾತ್ರ ರೂಪಿಸಿಕೊಳ್ಳುತ್ತಾರೆ ಎಂದು ದೂರಿದರು.
4. ಅಸಮಾನ ಸಮಾಜವನ್ನು ಪ್ರಶ್ನಿಸಿದರು ಮತ್ತು ಮಹಿಳೆಯರಿಗೆ ನ್ಯಾಯ, ಘನತೆ ಮತ್ತು ಸಮಾನತೆಯನ್ನು ಒತ್ತಾಯಿಸಿದರು. ಅವರು ತಮ್ಮ ಕೃತಿಯನ್ನು ಪ್ರತಿರೋಧದ ಪ್ರಬಲ ದಾಖಲೆಯನ್ನಾಗಿ ಮಾಡಿದರು.
5. ತಾರಾಬಾಯಿ ತನ್ನ ಟೀಕೆಯನ್ನು ಸಾಮಾಜಿಕ ಆಚರಣೆಗಳಿಗೆ ಸೀಮಿತಗೊಳಿಸಲಿಲ್ಲ. ಅಸಮಾನತೆಯನ್ನು ಸಮರ್ಥಿಸುವ ಧಾರ್ಮಿಕ ನಂಬಿಕೆಗಳನ್ನು ಸಹ ಪ್ರಶ್ನಿಸಿದರು.
6. ಧಾರ್ಮಿಕ ನಿಯಮಗಳು ಮಹಿಳೆಯರ ವಿರುದ್ಧ ಏಕೆ ಪಕ್ಷಪಾತ ಹೊಂದಿವೆ? ಈ ಸಂಪ್ರದಾಯಗಳಿಂದ ಯಾರು ಪ್ರಯೋಜನ ಪಡೆಯುತ್ತಾರೆ? ಎಂದು ಸಂಪ್ರದಾಯವಾದಿ ಸಮಾಜವನ್ನು ಪ್ರಶ್ನಿಸಿದರು. ಧರ್ಮದ ಬಗೆಗಿನ ಅವರ ಈ ಪ್ರಶ್ನೆಗಳು ಅತ್ಯಂತ ದಿಟ್ಟ ಮತ್ತು ಅಪಾಯಕಾರಿಯಾಗಿತ್ತು. ಧಾರ್ಮಿಕ ಪಠ್ಯಗಳನ್ನು ಪುರುಷರಿಗೆ ಅನುಕೂಲಕರ ರೀತಿಯಲ್ಲಿ ಅರ್ಥೈಸಲಾಯಿತು. ಮಹಿಳೆಯರನ್ನು ನಿಯಂತ್ರಿಸಲು ಸಂಪ್ರದಾಯಗಳನ್ನು ಬಳಸಲಾಯಿತು. ಕುರುಡು ನಂಬಿಕೆಯು ಅನ್ಯಾಯವನ್ನು ಮುಂದುವರಿಸಲು ಅವಕಾಶ ಮಾಡಿಕೊಟ್ಟಿತು. ತಾರಾಬಾಯಿಯವರು ಧರ್ಮವನ್ನು ಸವಾಲು ಮಾಡುವ ಮೂಲಕ, ಅವರು ಸಾಮಾಜಿಕ ಅಧಿಕಾರದ ಪ್ರಬಲ ಸ್ತಂಭಗಳಲ್ಲಿ ಆಕ್ರಮಣ ಮಾಡಿದರು, ಅವರ ಧ್ವನಿಯು ನಿಜವಾಗಿಯೂ ಕ್ರಾಂತಿಕಾರಕವಾಗಿತ್ತು.
7. ದೇವರು ಸರ್ವಶಕ್ತ, ನಿಷ್ಪಕ್ಷಪಾತಿ ಎಂದೆಲ್ಲಾ ಹೇಳಲಾಗುತ್ತದೆ. ಹಾಗಾದರೆ ಹೆಣ್ಣು ಮತ್ತು ಗಂಡು ಇಬ್ಬರನ್ನು ಸೃಷ್ಟಿಸಿದ್ದು ದೇವರೇ ಅಲ್ಲವೇ? ಆದರೆ ಸುಖ, ನೆಮ್ಮದಿ, ತೃಪ್ತಿ ಎಲ್ಲವನ್ನು ಗಂಡಿಗೇ ಕೊಟ್ಟು, ಹೆಣ್ಣನ್ನು ನರಳುವಂತೆ ಮಾಡಿದ್ದೇಕೆ? ಎಂದು ಪ್ರಶ್ನಿಸಿದರು.
8. ದೈಹಿಕ ಬಯಕೆಗಳಲ್ಲಿ ಸ್ತ್ರೀ-ಪುರುಷರ ನಡುವೆ ಯಾವ ವ್ಯತ್ಯಾಸವು ಇಲ್ಲದಿರುವಾಗ ಪುರುಷರು ಮಾತ್ರ ತಾನು ಹೆಣ್ಣಿಗಿಂತ ಭಿನ್ನ ಎಂದು, ಅವಳಿಗಿಂತ ಮೇಲು ಎಂದು ಭಾವಿಸುವುದೇಕೆ?
9. ಗಂಡ ಸತ್ತರೆ ಹೆಣ್ಣು ಶೋಷಣೆಗೊಳಗಾಗುತ್ತಾಳೆ. ಆದರೆ ಹೆಂಡತಿ ಸತ್ತರೆ ಗಂಡ ತಕ್ಷಣವೇ ಮರುಮದುವೆಯಾಗುತ್ತಾನೆ. ಈ ತಾರತಮ್ಯವೇಕೆ?
10. ಬ್ರಿಟಿಷ್ ಆಳ್ವಿಕೆಯ ಪ್ರಭಾವದಿಂದಾಗಿ ಪುರುಷರು ಹೊರಜಗತ್ತಿಗೆ ಆಧುನಿಕರಂತೆ ಕಾಣುವವರು, ಕುಟುಂಬದ ವಿಚಾರ ಬಂದಾಗ ಸಂಪ್ರದಾಯಸ್ಥ ಪುರೋಹಿತರಂತೆ ವರ್ತಿಸುವುದೇಕೆ?

11. ಮಹಿಳೆ ತನ್ನ ಜೀವನದ ಮೂರೂ ಹಂತಗಳಲ್ಲಿ ರಕ್ಷಣೆಯ ಉದ್ದೇಶದಿಂದ ಪುರುಷನ ನೆರಳಿನಲ್ಲಿರಬೇಕೆಂದು ಹೇಳುವ ಸ್ಮೃತಿಯು ಹೆಣ್ಣನ್ನು ದಮನಿಸುವ ತಂತ್ರವನ್ನು ಒಳಗೊಂಡಿದೆ ಎಂಬ ವಿಚಾರಗಳನ್ನು ಪ್ರಸ್ತಾಪಿಸಿದ್ದಾರೆ.

19 ನೇ ಶತಮಾನದಲ್ಲಿ ಅನ್ಯಾಯದ ವಿರುದ್ಧ ಮಾತನಾಡುವುದು ಸುಲಭವಾಗಿರಲಿಲ್ಲ. ಅದರಲ್ಲೂ ಪ್ರಮುಖವಾಗಿ ಮಹಿಳೆಗೆ ಅದು ಸಾಧ್ಯವಿರಲಿಲ್ಲ. ಅದಕ್ಕಾಗಿ ತಾರಾಬಾಯಿ ಸಂಪ್ರದಾಯವಾದಿ ಸಮಾಜದಿಂದ ಟೀಕೆಗಳನ್ನು ಎದುರಿಸಬೇಕಾಯಿತು.

ಇಂದು ಸ್ತ್ರೀ ಪುರುಷ ತುಲನಾ ಒಂದು ಮೂಲಭೂತ ಸ್ತ್ರೀವಾದಿ ಕೃತಿಯಾಗಿ ಉಳಿದಿದೆ. ಸ್ತ್ರೀ ಪುರುಷ ತುಲನಾದಲ್ಲಿ ನಿರ್ಭೀತ ಬರವಣಿಗೆಯ ಮೂಲಕ, ಅವರು ಭಾರತದಲ್ಲಿ ಸ್ತ್ರೀವಾದಿ ಮತ್ತು ಸಾಮಾಜಿಕ ನ್ಯಾಯ ಚಳುವಳಿಗಳಿಗೆ ಅಡಿಪಾಯ ಹಾಕಿದರು. ತಾರಾಬಾಯಿಯವರು ಒಬ್ಬ ಮಹಿಳೆಯಾಗಿ, ಅವರ ಪ್ರಕಟಣೆಯ ಕುರಿತು, ಸಾರ್ವಜನಿಕವಾಗಿ ಮಾತನಾಡುವುದು ಮತ್ತು ಬೌದ್ಧಿಕ ಸ್ಥಳಗಳಲ್ಲಿ ಭಾಗವಹಿಸುವಲ್ಲಿ ನಿರ್ಬಂಧಗಳನ್ನು ಎದುರಿಸಿದರು. ಧರ್ಮ ಮತ್ತು ಸಂಪ್ರದಾಯದ ಬಗ್ಗೆ ಅವರ ಟೀಕೆಯು ಸಮಾಜದ ಸಾಂಪ್ರದಾಯಿಕ ವರ್ಗಗಳಿಂದ ಬಲವಾದ ವಿರೋಧವನ್ನು ಎದುರಿಸಬೇಕಾಯಿತು. ಅವರ ಜೀವಿತಾವಧಿಯಲ್ಲಿ ಅವರ ಕೆಲಸವನ್ನು ಯಾರೂ ಸ್ವೀಕರಿಸಲಿಲ್ಲ. ಅನೇಕ ಜನರು ಅವರ ವಿಚಾರಗಳನ್ನು ಟೀಕಿಸಿದರು ಹಾಗೂ ನಿರ್ಲಕ್ಷಿಸಿದರು. ಆದರೆ ಅವರ ವಿಚಾರಗಳು ಭವಿಷ್ಯದ ಚಳುವಳಿಗಳಿಗೆ ಸ್ಫೂರ್ತಿಯಾದವು. ಮಹಿಳಾ ಹಕ್ಕುಗಳ ಚಳುವಳಿಗಳು, ದಲಿತ ಸ್ತ್ರೀವಾದ, ಸಾಮಾಜಿಕ ನ್ಯಾಯದ ಹೋರಾಟಗಳಿಗೆ ಸ್ಫೂರ್ತಿಯಾದವು. ಅವರ ಕೃತಿಯು ಅವರ ಜೀವಿತಾವಧಿಯಲ್ಲಿ ಹೆಚ್ಚಾಗಿ ನಿರ್ಲಕ್ಷಿಸಲ್ಪಟ್ಟಿದ್ದರೂ, 20ನೇ ಶತಮಾನದಲ್ಲಿ, ವಿಶೇಷವಾಗಿ ವಿದ್ವಾಂಸರು ಮತ್ತು ಸ್ತ್ರೀವಾದಿಗಳಲ್ಲಿ ಮನ್ನಣೆಯನ್ನು ಗಳಿಸಿದವು. ಅವರನ್ನು ಭಾರತದ ಆರಂಭಿಕ ಸ್ತ್ರೀವಾದಿ ವಿಮರ್ಶಕರಲ್ಲಿ ಒಬ್ಬರನ್ನಾಗಿ ಮಾಡಿತು. ಅವರ ವಿಚಾರಗಳು ಸಮಾನತೆ ಮತ್ತು ಮಾನವ ಹಕ್ಕುಗಳಿಗಾಗಿ ನಡೆಯುತ್ತಿರುವ ಹೋರಾಟಕ್ಕೆ ಸ್ಫೂರ್ತಿ ನೀಡುತ್ತಲೇ ಇವೆ. ಯಾರಾದರೂ ಅನ್ಯಾಯವನ್ನು ಪ್ರಶ್ನಿಸಲು ಧೈರ್ಯ ಮಾಡಿದಾಗ ಬದಲಾವಣೆ ಪ್ರಾರಂಭವಾಗುತ್ತದೆ ಎಂದು ಅವರ ಕೆಲಸವು ನಮಗೆ ನೆನಪಿಸುತ್ತದೆ. ಇಂದಿಗೂ, ಅವರ ಆಲೋಚನೆಗಳು ಪ್ರಸ್ತುತವಾಗಿವೆ. ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯವು 1994ರಲ್ಲಿ ಸ್ತ್ರೀಪುರುಷ ತುಲನಾ ಕೃತಿಯನ್ನು “A Comparison Between Women and Men” ಎಂಬ ಹೆಸರಿನಲ್ಲಿ ಇಂಗ್ಲೀಷ್ ಭಾಷೆಯಲ್ಲಿ ಪ್ರಕಟಿಸಿದೆ. ಅಲ್ಲದೆ ಡಾ. ಬಾಬಾ ಅಂಬೇಡ್ಕರ್ ಮರಾಠಾವಾಡ ವಿಶ್ವವಿದ್ಯಾಲಯದಲ್ಲಿ ತಾರಾಬಾಯಿ ಶಿಂಧೆ ಹೆಸರಿನಲ್ಲಿ Women’s Study Centre ಸ್ಥಾಪಿಸಲಾಗಿದೆ.

**ಉಪಸಂಹಾರ:**

ಹಲವು ಸುಧಾರಕರು ಮಹಿಳೆಯರ ಉನ್ನತಿಗಾಗಿ ಕೆಲಸ ಮಾಡಿದರೂ, ತಾರಾಬಾಯಿಯವರ ಹೋರಾಟದ ವಿಧಾನವು ವಿಶಿಷ್ಟವಾಗಿತ್ತು. ಇಂದು ಅವರನ್ನು ಸ್ತ್ರೀವಾದಿ ಚಿಂತನೆಯ ಪ್ರವರ್ತಕಿಯಾಗಿ, ಅನ್ಯಾಯದ ನಿರ್ಭೀತ ವಿಮರ್ಶಕಿಯಾಗಿ, ದಮನಿತರಿಗೆ ಧ್ವನಿಯಾಗಿ ಗುರುತಿಸಲಾಗಿದೆ. ಅವರು ಕೇವಲ ಸುಧಾರಣೆಗಳನ್ನು ಸೂಚಿಸಲಿಲ್ಲ, ಬದಲಿಗೆ ಇಡೀ ವ್ಯವಸ್ಥೆಯನ್ನು ಪ್ರಶ್ನಿಸಿದರು. ಅವರು ಒಬ್ಬ ಮಹಿಳೆಯಾಗಿ ಮಹಿಳೆಯ ದೃಷ್ಟಿಕೋನದಿಂದ ಮಾತನಾಡಿದರು. ಅವರ ನುಡಿ ನೇರ, ವಿಮರ್ಶಾತ್ಮಕ ಮತ್ತು ನಿರ್ಭೀತವಾಗಿತ್ತು. ಇದು ಅವರ ಅನೇಕ ಸಮಕಾಲೀನರಿಗಿಂತ ಅವರ ಕೆಲಸವನ್ನು ಹೆಚ್ಚು ಆಮೂಲಾಗ್ರವಾಗಿಸಿತು.

ಅವರ ಧೈರ್ಯ, ವಿಮರ್ಶಾತ್ಮಕ ಚಿಂತನೆ ಮತ್ತು ಸಮಾನತೆಯ ಬದ್ಧತೆಯು ಅವರನ್ನು ಭಾರತೀಯ ಇತಿಹಾಸದ ಪ್ರಮುಖ ಕ್ರಾಂತಿಕಾರಿ ಧ್ವನಿಗಳಲ್ಲಿ ಒಂದನ್ನಾಗಿ ಮಾಡಿದೆ.

**ಪರಾಮರ್ಶನ ಗ್ರಂಥಗಳು:**

1. ಗೀತಾ ಕೃಷ್ಣಮೂರ್ತಿ (ಸಂ.), (2024), ಸಾಧನಾ ಸಂಚಯ, ಬಸವನಗುಡಿ, ಬೆಂಗಳೂರು: ಸತ್ಪ್ರಕಾಶನ, ಅಬಲಾಶ್ರಮ.